ಹೆಚ್ಚುವರಿ ಸಿಜೆ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ

ಸಿ.ಸಿ.ನಂ. 951/2013

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಸ್.ಪಿ. ಚಂದ್ರಕುಮಾರ್ | ಪಿ.ಡಬ್ಲ್ಯೂ- 1 |
| ತಂದೆಯ/ಗಂಡನ ಹೆಸರು | : | ಲೇಟ್ ಬೆಟ್ಟಚಾರಿ | ಸಿ.ಡಬ್ಲ್ಯೂ- 2 |
| ವಯಸ್ಸು | : | 47 ವರ್ಷ | |
| ಉದ್ಯೋಗ | : | ಕಾರ್ ಚಾಲಕ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 19.11.2016 |
| ವಾಸಸ್ಥಳ | : | ಸರಗೂರು ಗ್ರಾಮ | |

ಮುಖ್ಯ ವಿಚಾರಣೆ ಃ ಎಪಿಪಿ ರವರಿಂದಃ

ಈಗ ನಾನು ನ್ಯಾಯಾಲಯದ ಮುಂದೆ ನೋಡುತ್ತಿರುವ ದಾಖಲಾತಿಯಲ್ಲಿ ನನ್ನ ಸಹಿಯನ್ನು ಗುರುತಿಸಿದ್ದು, ಅದನ್ನು ನಿಪಿ- 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ- 1ಎ ಎಂದು ಗುರುತಿಸಲಾಯಿತು. ನಿಪಿ- 1ಕ್ಕೆ ನಾನು ಸುಮಾರು ನಾಲ್ಕೈದು ವರ್ಷಗಳ ಹಿಂದೆ ಸಂಚಾರಿ ಪೋಲಿಸರು ಹಾಗೂ ಸರಗೂರು ಪೋಲಿಸರು ನನ್ನನ್ನು ಬಾಡಿಗೆಗೆಂದು ಕರೆದುಕೊಂಡು ಹೆಗ್ಗನೂರಿಗೆ ಹೋಗಿದ್ದಾಗ ಬಸ್ ನಿಲ್ದಾಣದ ಬಳಿ ನಿಲ್ಲಿಸಿರುತ್ತೇನೆ. ನಾನು ಕಾರಿನಲ್ಲಿ ಕುಳಿತಿರುತ್ತೇನೆ. ನಂತರ ಪೋಲಿಸರು ಒಂದು ಓಣಿಯ ಬಳಿ ಹೋಗಿರುತ್ತಾರೆ. ನಂತರ ಪೋಲಿಸರು ಆ ಕಡೆಯಿಂದ ಒಂದು ಬ್ಯಾಗ್‌ನ್ನು ಹಿಡಿದುಕೊಂಡು ಬಂದು ನನ್ನ ಕಾರಿನಲ್ಲಿ ಕುಳಿತಿರುತ್ತಾರೆ. ಆಗ ಆ ಬ್ಯಾಗಿನಲ್ಲಿ ನಾನು ನೋಡಿ ನವಿಲುಗಳು ಇರುತ್ತೇವೆ. ಅದರಲ್ಲಿ ಒಂದು ನವಿಲು ಸತ್ತಿದ್ದು, ಇನ್ನೊಂದು ಬದುಕಿರುತ್ತದೆ. ನಂತರ ನಾವು ಸರಗೂರಿಗೆ ಬಂದಾಗ ನನ್ನ ಬಳಿ ಪೋಲಿಸರು ಜೀವಂತ ನವಿಲನ್ನು ಮೃಗಲಾಯಕ್ಕೆ ಬಿಡಬೇಕೆಂದು ಹೇಳಿ ನನ್ನ ಸಹಿಯನ್ನು ಮಾಡಿಸಿಕೊಂಡಿರುತ್ತಾರೆ. ನಿಪಿ- 1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ, ಪೋಲಿಸರು ಈ ವಿಚಾರವಾಗಿ ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

(ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಎಪಿಪಿ ರವರಿಂದಃ

ದಿಃ 09.03.2011 ರಂದು ಮಧ್ಯಾಹ್ನ 11 ಗಂಟೆ ಸಮಯದಲ್ಲಿ ಸಂಚಾರಿ ಪೋಲಿಸರು ಹಾಗೂ ಸರಗೂರು ಪೋಲಿಸರು ನನ್ನ ಬಳಿ ಬಂದಿರುತ್ತಾರೆ ಎಂದರೆ ಸರಿ. ನಂತರ ಒಂದು ಖಚಿತವಾದ ಮಾಹಿತಿ ಇದೇ ಎಂದು ನನ್ನನ್ನು ಕರೆದಿರುತ್ತಾರೆ ಎಂದರೆ ಸರಿ. ಆಗ ಹೆಗ್ಗನೂರಿನ ಬಸ್ ನಿಲ್ದಾಣದಲ್ಲಿ ಆರೋಪಿ ಒಂದು ಬ್ಯಾಗ್‌ನ್ನು ಹಿಡಿದುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆಗ

ಅದನ್ನು ಪರಿಶೀಲಿಸಿ ನೋಡಲಾಗಿ ಆ ಬ್ಯಾಗ್‌ನಲ್ಲಿ ಎರಡು ನವಿಲುಗಳು ಇರುತ್ತೇವೆ ಎಂದರೆ ಸರಿಯಲ್ಲ. ನಂತರ ಆರೋಪಿಯನ್ನು ಹಿಡಿಯಲು ಪ್ರಯತ್ನಿಸಿದಾಗ ಆರೋಪಿ ಅಲ್ಲಿಂದು ಓಡಿಹೋದ ಬಗ್ಗೆ ಪೋಲಿಸರು ನನಗೆ ತಿಳಿಸಿರುತ್ತಾರೆ. ನಂತರ ಸದರಿ ನವಿಲುಗಳನ್ನು ಪರಿಶೀಲಿಸಿ ಅಲ್ಲೇ ಮಹಜರ್ ಕ್ರಮ ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಆಗ ಮಹಜರ್ ಮಾಡುವ ವೇಳ ಮಧ್ಯಾಹ್ನ 1 ರಿಂದ 2 ಗಂಟೆ ಸಮಯವಾಗಿರುತ್ತದೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುಡಲಾಯಿತು.</u>

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಹೆಚ್ಚುವರಿ ಸಿಜೆ ಮತ್ತು ಜೆ.ಎಂ.ಎಫ್.ಸಿ,
ಹೆಚ್.ಡಿ.ಕೋಟೆ.